


ಅಧಿಕಾರಿ ಹೇಳಿದ್ದಂತೆ ಬೆಳಗ್ಗೆ ಬೇಗನೇ ಜೆಸಿಬಿ ಬಂದಿತ್ತು. ಕೆಲಸ ಮುಗಿಯುವವರೆಗೂ ಅಲ್ಲಿ ಇದ್ದು ನೋಡಿಕೊಳ್ಳುವಂತೆ ಹೆಡ್ಡಪ್ಪನಿಗೆ ಹೇಳಿ ರಾಕೇಶ ಮಂಡಿ ಕೆಲಸಕ್ಕೆ ಹೋಗಿದ್ದ.

ಆ ಹತ್ತು ಗುಂಟೆ ವಿಸ್ತೀರ್ಣದ ಆ ತುಂಡು ಹೊಲದ ಮಧ್ಯೆ ಜೆಸಿಬಿ ಬಗೆಯಲು ಶುರು ಮಾಡಿತು.

'ಇದೇ ಟೈಮು ಮಾರಾಯ, ಕಿತ್ತಾರ್ ಕಡೆ ಕೊರೆದು ಹೋಗಿರ ಮೂಲೆಗೆ ಇದೇ ಮಣ್ಣು ಒಂದು ಹತ್ತು ಗಾಡಿ ತುಂಬಿಸಿ ಸಮಾ ಮಾಡಿಕೊಂಡು ಬುಡು' ಎಂದು ಅಲ್ಲಿಯೇ ಸುಳಿದಾಡುತ್ತಿದ್ದ ಅವನ ಡೈರಿ ಗೆಳೆಯರು ಸಲಹೆ ಕೊಟ್ಟಿದ್ದರು.

ಜೆಸಿಬಿ ಯಂತ್ರ ಹೊಲ ಬಗೆಯುವುದನ್ನು ನೋಡಲು ಹೊನ್ನಮ್ಮನಿಗೆ ಮನಸ್ಸಾಗಿರಲಿಲ್ಲ. ಮನೆಗೆಲಸವನ್ನೆಲ್ಲಾ ಮುಗಿಸಿ ಮುದ್ದೆ ಸಾರು ಮಾಡಿಟ್ಟಳು... ಮನಸ್ಸು ತಡೆಯಲಿಲ್ಲ. ಹೋಗಿ ಒಮ್ಮೆ ನೋಡಿಕೊಂಡು ಬರುವಾ ಎನ್ನಿಸಿತು.

ಪಕ್ಕದ ರುದ್ರಮ್ಮನ ಹೊಲದ ಮ್ಯಾತಾರಿನ ಕಡಗಿನ ಅಂಚಿನಲ್ಲಿ ನಡೆದು ಹೊರಟಳು. ಆ ಕಡಗು ಮುಂದೆ ತಗ್ಗಿನ ಕಡೆ ತಿರುಗಿ ಹೆಡ್ಡಪ್ಪನ ಹೊಲ ಹಾಗೂ ರುದ್ರಮ್ಮನ ಹೊಲ ಬೇರ್ಪಡಿಸಿತ್ತು. ಅಲ್ಲಿ ಹರಿದ ನೀರು